ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಸಿಂದಗಿ

**ಸಿ.ಸಿ ನಂಃ 4278/2023**

ಪಿರ್ಯಾದುದಾರರು ಃ ಸರಕಾರದ ಪರವಾಗಿ ಆಲಮೇಲ ಪಿ.ಎಸ್

ವಿರುದ್ಧ

ಆರೋಪಿಃ ಶೌಕತಅಲಿ ತಂ: ಮೈಬೂಬಸಾಬ ಮಶ್ಯಾಳಕರ ಮತ್ತು ಇತರರು,

**ದೋಷಾರೋಪಣೆ**

ಶ್ರೀ ಅಬ್ದುಲ್. ರಹಿಮಾನ. ಎ ಮುಲ್ಲಾ.,**B.A.L,LL.B.(Hon's).**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು. ಆದ ನಾನು, ಆರೋಪಿಯರಾದ

1. ಶೌಕತಅಲಿ ತಂ: ಮೈಬೂಬಸಾಬ ಮಶ್ಯಾಳಕರ
   ವಯಾಃ 60 ವರ್ಷ, ಉ ಃ ಒಕ್ಕಲುತನ
   ಸಾಃ ಬಳಗಾನೂರು ತಾಃ ಆಲಮೇಲ

2. ಶಾಹಿನ್ ಪರ್ವಿನ್ ತಂ: ಶೌಕತಅಲಿ ಮಶ್ಯಾಳಕರ
   ವಯಾಃ 48 ವರ್ಷ, ಉ ಃ ಮನೆಗೆಲಸ
   ಸಾಃ ಬಳಗಾನೂರು ತಾಃ ಆಲಮೇಲ

3. ಮಾಲನಬಿ ಗಂ: ಅಬ್ದುಲ ಅಗರಖೇಡ
   ವಯಾಃ 65 ವರ್ಷ, ಉ ಃ ಒಕ್ಕಲುತನ
   ಸಾ: ತೆನ್ನಳ್ಳಿ ತಾ ಇಂಡಿ ಜಿ : ವಿಜಯಪುರ.

4. ಅಲ್ಲಾವುದ್ದಿನ ತಂ: ಮಲಕಸಾಬ ಮುಲ್ಲಾ
   ವಯಾಃ 44 ವರ್ಷ, ಉ ಃ ಒಕ್ಕಲುತನ
   ಸಾಃ ಸುರಗಿಹಳ್ಳಿ ತಾಃ ಇಂಡಿ

5. ಹಾಜಿಸಾಬ @ ಹಾಜಿಮಲಂಗ ತಂ: ಮೈಬೂಬಸಾಬ ಬಲಬಟ್ಟಿ
   ವಯಾಃ 51 ವರ್ಷ, ಉ ಃ ಒಕ್ಕಲುತನ
   ಸಾಃ ಬಳಗಾನೂರು ತಾಃ ಆಲಮೇಲ

6. ಪೈಗಂಬರ ತಂ: ಸೈಪನಸಾಬ ಮಣೂರ
ವಯಾಃ 45 ವರ್ಷ, ಉ ಃ ಒಕ್ಕಲುತನ
ಸಾಃ ಬಳಗಾನೂರು ತಾಃ ಆಲಮೇಲ

ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

ಮೊದಲನೇಯದಾಗಿ ಆಲಮೇಲ ಪೋಲಿಸ ಠಾಣೆ ವ್ಯಾಪ್ತಿಯಲ್ಲಿ ಬಳಗಾನೂರು ಹದ್ದಿಯಲ್ಲಿ ಬರುವ ಪಿರ್ಯಾದಿಯ ಹೆಸರಿನಲ್ಲಿ ಇರುವ ರಿ.ಸ.ನಂ: 100/5 ಜಮೀನದಲ್ಲಿ ದಿ: 11.06.2023 ರಂದು ಸಂಜೆ 5.30 ಗಂಟೆ ಸುಮಾರಿಗೆ ಆರೋಪಿ ಮತ್ತು ಪಿರ್ಯಾದಿ ಮಧ್ಯೆ ರಿ.ಸ.ನಂ: 100/5 ಜಮೀನಕ್ಕೆ ಸಂಬಂಧೀಸಿದಂತೆ ತಂಟೆ ತಕರಾರು ಇದ್ದು, ಪಿರ್ಯಾದಿಯು ತನ್ನ ಜಮೀನದಲ್ಲಿ ಟ್ರಾಕ್ಟರನಿಂದ ಕಬ್ಬಿನ ಬೋದ ಹಾಕುವ ತಯಾರಿಯಲ್ಲಿದ್ದಾಗ ಆರೋಪಿತರಾದ ನೀವು ಗೈರ ಕಾಯ್ದೇಶೀರ ಮಂಡಳಿಯಾಗಿ ಬಂದಿದ್ದು, ಈ ಮೂಲಕ ಭಾ.ದಂ.ಸಂ. 143 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಎರಡನೇಯದಾಗಿ ಆರೋಪಿತರಾದ ನೀವು ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಗೈರ ಕಾಯ್ದೇಶೀರ ಮಂಡಳಿಯಾಗಿ ಬಂದು ಪಿರ್ಯಾದಿಯ ಜೊತೆ ಜಗಳ ತೆಗೆದಿದ್ದು ಈ ಮೂಲಕ ಭಾ.ದಂ.ಸಂ. 147 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಮೂರನೇಯದಾಗಿ ಆರೋಪಿತರಾದ ನೀವು ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಗೈರ ಕಾಯ್ದೇಶೀರ ಮಂಡಳಿಯಾಗಿ ಕೈಯಲ್ಲಿ ಬಡಿಗೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದಿದ್ದು, ಈ ಮೂಲಕ ಭಾ.ದಂ.ಸಂ. 148 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ನಾಲ್ಕನೇಯದಾಗಿ ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಗೈರ ಕಾಯ್ದೇಶೀರ ಮಂಡಳಿಯಾಗಿ ಬಂದು, ಪಿರ್ಯಾದಿಯು ಸದರಿ ಜಮೀನು ನನ್ನ ಹೆಸರಿಗೆ ಇರುತ್ತದೆ ನಾನು ಸಾಗುವಳಿ ಮಾಡಿಕೊಂಡು ಬಂದಿರುತ್ತೇನೆ ಎಂದು ಹೇಳಿದಾಗ 1 ನೇ ಆರೋಪಯು ಪಿರ್ಯಾದಿಗೆ ಕೈಯಿಂದ

ಮೂಗಿಗೆ ಮತ್ತು ಕಿವಿಗೆ ಹೊಡೆದಿದ್ದು, 3 ಮತ್ತು 6 ನೇ ಆರೋಪಿ ಸೇರಿ ಪಿರ್ಯಾದಿಗೆ ನೆಲಕ್ಕೆ ಕೆಡವಿ ಬಡಿಗೆಯಿಂದ ಮತ್ತು ಕಲ್ಲಿನಿಂದ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಈ ಮೂಲಕ ಭಾ.ದಂ.ಸಂ. 323 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಐದನೇಯದಾಗಿ, ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಗೈರ ಕಾಯ್ದೆಶೀರ ಮಂಡಳಿಯಾಗಿ ಬಂದು, ಚಾ.ಸಾ.4 ಮತ್ತು 5 ರವರು ಜಗಳ ನೊಡಿ ಬಿಡಿಸಲು ಬಂದಾಗ 4 ನೇ ಆರೋಪಿ ಈತನು ಚಾ.ಸಾ.4 ರವರಿಗೆ ಕಲ್ಲಿನಿಂದ ಬೆನ್ನಿಗೆ ಮತ್ತು ಕಾಲಿಗೆ ಹೊಡೆದು ಭಾರಿಗಾಯಪಡಿಸಿದ್ದು, 5 ನೇ ಆರೋಪಿ ಈತನು ಚಾ.ಸಾ.5 ಈತನಿಗೆ ಬಲಗೈ ಹೆಬ್ಬೆರಳಿಗೆ ಮತ್ತು ಎಡಗಡೆ ಭುಜಕ್ಕೆ ಕಲ್ಲಿನಿಂದ ಹೊಡೆದು ಭಾರಿ ಗಾಯಪಡಿಸಿದ್ದು, ಈ ಮೂಲಕ ಭಾ.ದಂ.ಸಂ. 326 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಆರನೇಯದಾಗಿ, ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಗೈರ ಕಾಯ್ದೆಶೀರ ಮಂಡಳಿಯಾಗಿ ಬಂದು, ಪಿರ್ಯಾದಿಯ ಜಮೀನದಲ್ಲಿ ಅತಿಕ್ರಮ ವಾಗಿ ಪ್ರವೇಶ ಮಾಡಿ ಈ ಮೂಲಕ ಭಾ.ದಂ.ಸಂ. 447 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಏಳನೇಯದಾಗಿ, ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಗೈರ ಕಾಯ್ದೆಶೀರ ಮಂಡಳಿಯಾಗಿ ಬಂದು, 3 ಮತ್ತು 6 ನೇ ಆರೋಪಿ ಪಿರ್ಯಾದಿ ಹತ್ತಿರ ಇದ್ದ ರೂ.18,000/- ಗಳ ಮೊಬೈಲನ್ನು ಹೊಡೆದು ಹಾಳು ಮಾಡಿದ್ದು ಈ ಮೂಲಕ ಭಾ.ದಂ.ಸಂ. 427 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಎಂಟನೇಯದಾಗಿ ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಗೈರ ಕಾಯ್ದೆಶೀರ ಮಂಡಳಿಯಾಗಿ ಬಂದು, ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಈ ಮೂಲಕ ಭಾ.ದಂ.ಸಂ. 504 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ**?**

ಒಂಬತ್ತನೇಯದಾಗಿ ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಗೈರ ಕಾಯ್ದೆಶೀರ ಮಂಡಳಿಯಾಗಿ ಬಂದು, ಪಿರ್ಯಾದಿಗೆ ಇನ್ನೊಮ್ಮೆ ಈ ಜಮೀನಕ್ಕೆ ಬಂದರೆ ಖಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ್ದು ಈ ಮೂಲಕ ಭಾ.ದಂ.ಸಂ. 506 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ**?**

ಈ ಮೇಲಿನ ಆರೋಪಣೆಗಳಿಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕ ಃ 20.08.2025

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ, ಸಿಂದಗಿ.